# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 134 |
| 2. | ಸದಸ್ಯರ ಹೆಸರು: | ಶ್ರೀ ಯು.ಬಿ ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| 3. | ಉತ್ತರಿಸಬೇಕಾದ ದಿನಾಂಕ: | 14-02-2024 |
| 4. | ಉತ್ತರಿಸುವ ಸಚಿವರು: | ಮಾನ್ಯ ಕಂದಾಯ ಹಾಗೂ ಸಕಾಲ ಸಚಿವರು |

| ಪ್ರಶ್ನೆ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಸಕಾಲ ಯೋಜನೆ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?: | ಸಕಾಲ ಕಾಯ್ದೆಯನ್ನು ಅನುಷ್ಠಾನಗೊಳಿಸಿದ 2012ರಲ್ಲಿ 11 ಇಲಾಖೆ/ ಸಂಸ್ಥೆಗಳ 151 ಸೇವೆಗಳು ಮಾತ್ರ ಕಾಯ್ದೆಯಡಿಯಲ್ಲಿ ಅಧಿಸೂಚಿತಗೊಂಡಿದ್ದವು. ಪ್ರಸ್ತುತ 100 ಇಲಾಖೆ /ಸಂಸ್ಥೆಗಳ 1202 ಸೇವೆಗಳನ್ನು ಕಾಯ್ದೆಯಡಿ ಅಧಿಸೂಚಿಸಲಾಗಿರುತ್ತದೆ. ಸೇವಾ ಹಕ್ಕು ಕಾಯ್ದೆಗಳ ಅನುಸಾರ ಸೇವೆಗಳನ್ನು ನೀಡುತ್ತಿರುವ ರಾಜ್ಯಗಳ ಪೈಕಿ ಅಧಿಸೂಚಿತಗೊಂಡ ಸೇವೆಗಳ ಸಂಖ್ಯಾರೀತ್ಯಾ ಕರ್ನಾಟಕವು ಪ್ರಥಮ ಸ್ಥಾನದಲ್ಲಿರುತ್ತದೆ.<br><br>IPGRS Master data, ಸೇವಾಸಿಂಧುರಡಿ ಈಗಾಗಲೇ Online ಮೂಲಕ ಲಭ್ಯವಿರುವ ಸೇವೆಗಳು ಹಾಗೂ ಆಡಳಿತ ಸುಧಾರಣೆ ಆಯೋಗ -2 ರವರ ಶಿಫಾರಸ್ಸುಗಳ ಅನ್ವಯ ಇನ್ನೂ ಹಲವಾರು ಸೇವೆಗಳನ್ನು ಸಕಾಲ ಕಾಯ್ದೆಯಡಿ ಅಧಿಸೂಚಿಸಲು ದಿನಾಂಕ:10.01.2024ರಂದು ಮಾನ್ಯ ಕಂದಾಯ ಹಾಗೂ ಸಕಾಲ ಸಚಿವರ ಅಧ್ಯಕ್ಷತೆಯಲ್ಲಿ ಎಲ್ಲಾ ಆಡಳಿತ ಇಲಾಖೆಗಳೊಂದಿಗೆ ಪ್ರತ್ಯೇಕವಾಗಿ ಸಭೆಯನ್ನು ನಡೆಸಿ ಹೊಸದಾಗಿ ಸೇವೆಗಳನ್ನು ಸಕಾಲ ಕಾಯ್ದೆಯಡಿ ಅಧಿಸೂಚಿಸಲು ಅಗತ್ಯ ಕ್ರಮ ವಹಿಸುವಂತೆ ಆಡಳಿತ ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.<br><br>ದಿನಾಂಕ:12.02.2024 ಕ್ಕೆ ಸಕಾಲದಡಿ ಒಟ್ಟಾರೆ 33,57,50,807 ಅರ್ಜಿಗಳನ್ನು ಸ್ವೀಕರಿಸಿದ್ದು, ಇವುಗಳ ಪೈಕಿ (ಸಂಚಿತ) 33,50,61,887 ಅರ್ಜಿಗಳನ್ನು ವಿಲೇವಾರಿ ಮಾಡಿದ್ದು, ನಿಗದಿತ ಸಮಯದ ವಿಲೇವಾರಿ ದರ 95.04% ಆಗಿರುತ್ತದೆ.<br><br>ಆಗಸ್ಟ್-2023 ರಲ್ಲಿ ಪ್ರಾರಂಭಿಸಲಾದ ಸಕಾಲ ಅರಿವು ಹರಿವು ಕಾರ್ಯಕ್ರಮದಡಿ ಸಕಾಲ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಾರ್ವಜನಿಕರೊಂದಿಗೆ ನಿರಂತರ ಸಂಪರ್ಕವಿರುವ ಅಂಗನವಾಡಿ ಕಾರ್ಯಕರ್ತೆಯರು, ಸ್ವಸಹಾಯ ಗುಂಪುಗಳು, ಆಶಾ ಕಾರ್ಯಕರ್ತೆಯರು, ಬಾಪೂಜಿ ಸೇವಾ ಕೇಂದ್ರ ಮತ್ತು ಗ್ರಾಮ ಒಂದು ರ ಪ್ರತಿನಿಧಿಗಳು ಹಾಗೂ ಹಲವಾರು ಇಲಾಖೆಗಳ ಕ್ಷೇತ್ರ ಮಟ್ಟದ ನೌಕರರಿಗೆ ದಿನಾಂಕ: 31-01-2024 ಕ್ಕೆ ರಾಜ್ಯದಾದ್ಯಂತ 16,188 Master Trainers ತರಬೇತಿಯನ್ನು ನೀಡಲಾಯಿತು. ಇವರ ಸಹಾಯದೊಂದಿಗೆ ಆರಂಭಿಸಲಾದ ಕ್ಯಾಸ್ಕೇಡ್ ತರಬೇತಿ ಕಾರ್ಯಕ್ರಮದ ಅಡಿಯಲ್ಲಿ ದಿನಾಂಕ:31.01.2024 ಕ್ಕೆ 11,177 ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ನೀಡಲಾಗಿದೆ.<br><br>Tesz ರಡಿ (2021 ರಿಂದ 2023) - ನಾಗರಿಕರ ಪ್ರಶ್ನೆಗಳನ್ನು ಪರಿಹರಿಸಲು ಡಿಜಿಟಲ್ ವೇದಿಕೆ ಇದ್ದು, ಈ ಉಪಕ್ರಮದ ಮೂಲಕ 8,54,151 ಕ್ಕೂ ಹೆಚ್ಚು ನಾಗರಿಕರು ಮೇ 2021 ರಿಂದ 07-ನವೆಂಬರ್-2023 ರವರೆಗೆ ಪ್ರಯೋಜನ ಪಡೆದಿದ್ದಾರೆ. ಸಕಾಲ ಮಿಷನ್ 27,035 ಕ್ಕೂ ಹೆಚ್ಚು ಮೆಚ್ಚುಗೆಯನ್ನು (Likes) ಪಡೆದುಕೊಂಡಿದೆ. https://www.tesz.in/profile/sakala. Tesz ವೇದಿಕೆಯಲ್ಲಿ 2021, 2022 ಹಾಗೂ 2023ನೇ ವರ್ಷಗಳಲ್ಲಿ ಸಕಾಲ ಮಿಷನ್ ಗೆ 'Best Citizen Caring Government Departments' Award ದೊರಕಿದೆ. |

| | | |
|---|---|---|
| ಆ | ಆಗಿದ್ದಲ್ಲಿ ಬಾಕಿ ಉಳಿದಿರುವ 98 ಸಾವಿರಕ್ಕೂ ಹೆಚ್ಚು ಅರ್ಜಿಗಳ ತ್ವರಿತ ವಿಲೇವಾರಿಗೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು?: | ಇತ್ಯರ್ಥಕ್ಕೆ ಬಾಕಿ ಉಳಿದಿರುವ ಅರ್ಜಿಗಳ ತ್ವರಿತ ವಿಲೇವಾರಿಗಾಗಿ ಅಗತ್ಯ ಕ್ರಮ ಕೈಗೊಳ್ಳಲು ಈಗಾಗಲೇ ಗರಿಷ್ಠ ಬಾಕಿ ಇರುವ ಬಿ.ಬಿ.ಎಂ.ಪಿ, ಕಂದಾಯಇಲಾಖೆ, ಕಾರ್ಮಿಕ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇತ್ಯಾದಿ ಇಲಾಖೆಗಳಿಗೆ ಆಗಿಂದಾಗ್ಗೆ ಪತ್ರಗಳನ್ನು ಬರೆಯಲಾಗುತ್ತಿದೆ. ಅಲ್ಲದೆ ದಿನಾಂಕ: 11.08.2023 ಮತ್ತು 10.01.2024ರಂದು ಮಾನ್ಯ ಕಂದಾಯ ಹಾಗೂ ಸಕಾಲ ಸಚಿವರ ಅಧ್ಯಕ್ಷತೆಯಲ್ಲಿ ಎಲ್ಲಾ ಆಡಳಿತ ಇಲಾಖೆಗಳೊಂದಿಗೆ ನಡೆದ ಸಭೆಗಳಲ್ಲಿ ಬಾಕಿ ಉಳಿದಿರುವ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸುವಂತೆ ಸೂಕ್ತ ನಿರ್ದೇಶನ ನೀಡಲಾಗಿದೆ. ದಿನಾಂಕ:06.12.2023ರಂದು ಅಪರ ಮಿಷನ್ ನಿರ್ದೇಶಕರು-1, ಸಕಾಲ ಮಿಷನ್ ಇವರ ಅಧ್ಯಕ್ಷತೆಯಲ್ಲಿ ಎಲ್ಲಾ ಜಿಲ್ಲೆಗಳ ಅಪರ ಜಿಲ್ಲಾಧಿಕಾರಿಗಳೊಂದಿಗೆ ಹಾಗೂ ದಿನಾಂಕ:22.12.2023, 28.12.2023 ಮತ್ತು 23.01.2024ರಂದು ಆಡಳಿತಾಧಿಕಾರಿಗಳು, ಸಕಾಲ ಮಿಷನ್ ಇವರು ಎಲ್ಲಾ ಜಿಲ್ಲೆಗಳ ಸಕಾಲ ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರುಗಳೊಂದಿಗೆ ನಡೆಸಿದ VC ಸಭೆಗಳಲ್ಲಿಯೂ ಸಹ ಬಾಕಿ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಅಗತ್ಯ ಕ್ರಮವಹಿಸುವಂತೆ ಸೂಚನೆ ನೀಡಲಾಗಿದೆ.<br><br>ಮುಂದುವರೆದಂತೆ, ಜಿಲ್ಲಾ ಮಟ್ಟದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಕಾಲ ಸಮನ್ವಯ ಸಮಿತಿಗಳನ್ನು ರಚಿಸಲಾಗಿದ್ದು, ಈ ಸಮಿತಿಗಳು ಜಿಲ್ಲೆಗಳಲ್ಲಿ ಸಭೆ ನಡೆಸಿ ಜಿಲ್ಲೆಯಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಅರ್ಜಿಗಳ ವಿಲೇವಾರಿಗಾಗಿ ಕ್ರಮ ಕೈಗೊಳ್ಳುತ್ತಿದ್ದಾರೆ. ದಿನಾಂಕ:07.02.2024 ಕ್ಕೆ ರಾಜ್ಯಾದ್ಯಂತ ಕಳೆದ 36 ತಿಂಗಳುಗಳಲ್ಲಿ 753 ಸಕಾಲ ಸಮನ್ವಯ ಸಮಿತಿ ಸಭೆಗಳನ್ನು ನಡೆಸಲಾಗಿದೆ.<br><br>ಈ ಎಲ್ಲಾ ಪ್ರಯತ್ನಗಳ ಹಿನ್ನೆಲೆಯಲ್ಲಿ ಜುಲೈ 2023ರಲ್ಲಿ 1,48,000 ಇದ್ದ ಸಕಾಲ ಬಾಕಿ ಅರ್ಜಿಗಳ ಸಂಖ್ಯೆಯು ಪ್ರಸ್ತುತ ದಿನಾಂಕ:09.02.2024 ಕ್ಕೆ 71,881ಕ್ಕೆ ಇಳಿದಿದೆ. |
| | ಈ ಸಂಬಂಧ ಅಗತ್ಯ ಸುತ್ತೋಲೆಯನ್ನು ಹೊರಡಿಸಲಾಗುವುದೇ? (ವಿವರಿಸುವುದು) | ಮೇಲಿನಂತೆ ಕ್ರಮ ವಹಿಸಲಾಗಿದೆ. |

ಸಂಖ್ಯೆ: ಸಿಆಸುಇ 29 ಎಸ್ಎಎಂಎಸ್ 2024

**(ಕೃಷ್ಣ ಭೈರೇಗೌಡ)**
ಕಂದಾಯ ಹಾಗೂ ಸಕಾಲ ಸಚಿವರು